shashi.

# ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.

ಸಂಖ್ಯೆ: ಯೋ(1) ಮು.ಯೋ.ಕಾ.ಹ.ಬಿ. 01/2010-11 ದಿನಾಂಕ:07-04-2010

**ಜ್ಞಾಪನಾ**

ವಿಷಯ: 2010-11ನೇ ಸಾಲಿಗೆ ಶಿಕ್ಷಣ ಇಲಾಖೆಯ ರಾಜ್ಯ ವಲಯದ ಮುಂದುವರೆದ ಯೋಜನಾ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಅನುಮೋದನೆ ನೀಡಿ ಹಣ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ: ಸರ್ಕಾರಿ ಆದೇಶದ ಸಂಖ್ಯೆ: ಇಡಿ 99 ಯೋಯೋಕ 2010 ಬೆಂಗಳೂರು ದಿನಾಂಕ: 03.04.2010.[ಇಡಿ 49 ಸ್ಕೀಮರ(ಯೂನಿಕ್)2010,ದಿನಾಂಕ: 03.04.2010]

-----

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರಿ ಆದೇಶದಲ್ಲಿ 2010-11ನೇ ಸಾಲಿಗೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ.

| ಸರ್ಕಾರಿ ಆದೇಶದಲ್ಲಿನ ಕ್ರಸಂ. | ಕಾರ್ಯಕ್ರಮ/ಉಪಕಾರ್ಯಕ್ರಮದ ಹೆಸರು ಹಾಗೂ ಲೆಕ್ಕ ಶೀರ್ಷಿಕೆ | ಅನುಷ್ಠಾನಗೊಳಿಸಬೇಕಾದ ಕಾರ್ಯಕ್ರಮ | ಬಿಡುಗಡೆ ಮಾಡಲಾದ ಅನುದಾನ (ರೂ.ಲಕ್ಷಗಳಲ್ಲಿ) | ಅನುಷ್ಠಾನಾಧಿಕಾರಿಗಳು |
|---|---|---|---|---|
| 1 (1) | ಪರಿವೀಕ್ಷಣೆ (ಪ್ರಾಥಮಿಕ) 2202-01-104-0-00-059 | ಜಿಲ್ಲಾ ಉಪನಿರ್ದೇಶಕರುಗಳ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯಗಳಿಗೆ ಕಂಪ್ಯೂಟರ್, ಸ್ಟೇಷನರಿ, ಮುಂತಾದವುಗಳ ಖರೀದಿಗಾಗಿ | 10.00 | ಸಹ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಬೆಂಗಳೂರು. |
| 1 (2) | ಪರಿವೀಕ್ಷಣೆ (ಪ್ರಾಥಮಿಕ) 2202-01-104-0-00-059 | ಧಾರವಾಡ ನಗರ ಶೈಕ್ಷಣಿಕ ವಲಯ ವಿಭಜನೆ ಕುರಿತ ಆವರ್ತಕ, ಅನಾವರ್ತಕ ವೆಚ್ಚಗಳಿಗಾಗಿ | 10.00 | ಸಹ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಬೆಂಗಳೂರು. |
| 1(3) | ಪರಿವೀಕ್ಷಣೆ (ಪ್ರಾಥಮಿಕ 2202-01-104-0-00-059 | ಜಿಲ್ಲಾ ಉಪನಿರ್ದೇಶಕರ ಕಛೇರಿ ಸಾದಿಲ್ವಾರು ವೆಚ್ಚಕ್ಕಾಗಿ-ರೂ.40.00 ಲಕ್ಷ | 40.00 | ಸಹ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಬೆಂಗಳೂರು |
| 2 | ವಿದ್ಯಾವಿಕಾಸ 2202-01-109-0-03<br>221- 2900.00 ಲಕ್ಷ<br>422- 2500.00 ಲಕ್ಷ<br>423- 600.00 ಲಕ್ಷ | 2010-11ನೇ ಸಾಲಿಗೆ ಸರ್ಕಾರಿ ಶಾಲೆಗಳಲ್ಲಿ 1 ರಿಂದ 10ನೇ ತರಗತಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ಒಟ್ಟು 60.00 ಲಕ್ಷ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಒಂದು ಜೊತೆ ಉಚಿತ ಸಮವಸ್ತ್ರ ಒದಗಿಸುವ ಕಾರ್ಯಕ್ರಮವನ್ನು ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ ಮೊತ್ತವನ್ನು ಆಯಾ ಉದ್ದೇಶಕ್ಕಾಗಿ ಬಳಸಿ ಅನುಷ್ಠಾನಗೊಳಿಸಲು | 6000.00 | ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. |
| 3(1) | ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಉತ್ತೇಜನಕ್ಕಾಗಿ ಚಟುವಟಿಕೆಗಳು 2202-01-800-1-35-059 | ಉರ್ದು ಮತ್ತು ಇತರೆ ಅಲ್ಪ ಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯದ ಶೈಕ್ಷಣಿಕ ಚಟುವಟಿಕೆ, ಕಛೇರಿ ಆಧುನೀಕರಣ, ಯಂತ್ರೋಪಕರಣಗಳ ಖರೀದಿ ಹಾಗೂ ಕಛೇರಿ ಸಾಮಾನ್ಯ ವೆಚ್ಚಗಳಿಗಾಗಿ. | 30.00 | ನಿರ್ದೇಶಕರು (ಮೈನಾರಿಟಿ) ಆಯುಕ್ತರ ಕಛೇರಿ, ಬೆಂಗಳೂರು. |
| 3(2) | ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಉತ್ತೇಜನಕ್ಕಾಗಿ ಚಟುವಟಿಕೆಗಳು 2202-01-800-1-35 059 - 100.00 ಲಕ್ಷ | ರಾಜ್ಯದ ಎಲ್ಲಾ ಸರ್ಕಾರಿ ಪ್ರೌಢಶಾಲೆಗಳಿಗೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು. | 100.00 | ನಿರ್ದೇಶಕರು (ಪ್ರೌಢಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. |

| | | | | |
|---|---|---|---|---|
| 3(3) | ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಉತ್ತೇಜನಕ್ಕಾಗಿ ಚಟುವಟಿಕೆಗಳು 2202-01-800-1-35 002- 2.06 ಲಕ್ಷ 011- 1.03 ಲಕ್ಷ 014- 0.46 ಲಕ್ಷ | ಪತ್ರಾಂಕಿತ ವ್ಯವಸ್ಥಾಪಕರ ವೇತನ ವೆಚ್ಚಗಳಿಗಾಗಿ (ಮಧ್ಯಾಹ್ನ ಉಪಹಾರ ಯೋಜನೆ) | 3.55 | ಸಹ ನಿರ್ದೇಶಕರು, ಎಂ.ಎಂ.ಎಸ್. ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು. |
| 3(4) | ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಉತ್ತೇಜನಕ್ಕಾಗಿ ಚಟುವಟಿಕೆಗಳು 2202-01-800-1-35-021 | ವೈದ್ಯಕೀಯ ವೆಚ್ಚದ ಮರುಪಾವತಿ (ಎಂ.ಎಂ.ಎಸ್.) | 1.00 | ಸಹ ನಿರ್ದೇಶಕರು, ಎಂ.ಎಂ.ಎಸ್. ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು. |
| 3 (5) | ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಉತ್ತೇಜನಕ್ಕಾಗಿ ಚಟುವಟಿಕೆಗಳು 2202-01-800-1-35-195 | ವಾಹನ ವೆಚ್ಚಗಳಿಗಾಗಿ ಎಂ.ಎಂ.ಎಸ್. | 1.45 | ಸಹ ನಿರ್ದೇಶಕರು, ಎಂ.ಎಂ.ಎಸ್ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು. |
| 3 (6) | ಸಾರ್ವತ್ರಿಕ್ ಪ್ರಾಥಮಿಕ ಶಿಕ್ಷಣದ ಉತ್ತೇಜನಕ್ಕಾಗಿ ಚಟುವಟಿಕೆಗಳು 2202-01-800-1-35-059 | ಎಂ.ಎಂ.ಎಸ್.ಕೇಂದ್ರ ಕಾರ್ಯಾಲಯದ ವೆಚ್ಚಗಳಿಗಾಗಿ | 20.00 | ಸಹ ನಿರ್ದೇಶಕರು, ಎಂ.ಎಂ.ಎಸ್ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು. |
| 3(7) | ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಉತ್ತೇಜನಕ್ಕಾಗಿ ಚಟುವಟಿಕೆಗಳು 2202-01-800-1-35-059- 33.00 ಲಕ್ಷ 422-100.00 ಲಕ್ಷ 423-100.00 ಲಕ್ಷ | ಪ್ರತಿಭಾ ಕಾರಂಜಿ ಕಾರ್ಯಕ್ರಮಗಳನ್ನು ಕ್ಲಸ್ಟರ್, ತಾಲ್ಲೂಕು, ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಏರ್ಪಡಿಸಲು. | 233.00 | ನಿರ್ದೇಶಕರು (ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು |
| 3(8) | ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಉತ್ತೇಜನಕ್ಕಾಗಿ ಚಟುವಟಿಕೆಗಳು 2202-01-800-1-35-059- 25.00 ಲಕ್ಷ 422- 150.00 ಲಕ್ಷ 423- 80.00 ಲಕ್ಷ | 1. ರಾಷ್ಟ್ರೀಯ ಕ್ರೀಡಾಕೂಟ ಸಂಘಟಿಸಲು<br>2. ಕ್ರೀಡಾಪಟುಗಳ ರಾಜ್ಯ/ರಾಷ್ಟ್ರಮಟ್ಟದ ತರಬೇತಿಗಾಗಿ.<br>3. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮತ್ತು ಸರ್ಕಾರಿ ಪ್ರೌಢಶಾಲೆಯನ್ನು ಮಾದರಿ ಕ್ರೀಡಾ ಶಾಲೆಯನ್ನಾಗಿ ಮಡಲು ಅಗತ್ಯ ಉಪಕರಣಗಳ ಖರೀದಿಗಾಗಿ ಒಂದು ಜಿಲ್ಲೆಯಲ್ಲಿ 4 ಶಾಲೆಗಳನ್ನು ಅಭಿವೃದ್ಧಿ ಗೊಳಿಸಲು 34 ಜಿಲ್ಲೆಗಳಿಗೆ.<br>4. ಮೇಲಾಟದ 200 ಮೀ.ಓಟದ ಕ್ರೀಡಾಂಗಣವನ್ನು ಶಾಲಾ ಮೈದಾನದಲ್ಲಿ ಅಭಿವೃದ್ಧಿಪಡಿಸಲು ಹಾಗೂ ಮೇಲಾಟದ ಸೌಲಭ್ಯ ಒದಗಿಸಲು ಪ್ರತಿ ಜಿಲ್ಲೆಗೆ ಒಂದು ಸ.ಹಿ.ಪ್ರಾ.ಶಾಲೆ ಮತ್ತು ಒಂದು ಪ್ರೌಢಶಾಲೆಗೆ ಒಟ್ಟು 34 ಜಿಲ್ಲೆಗಳಿಗೆ.<br>5. ಜಿಲ್ಲಾ ಮಟ್ಟದಲ್ಲಿ ವಿಜೇತರಾದ ಕ್ರೀಡಾ ಪಟ್ಟುಗಳಿಗೆ ಬಹುಮಾನ ನೀಡಲು.<br>6. ದೈಹಿಕ ಶಿಕ್ಷಣಾಧಿಕಾರಿ/ಶಿಕ್ಷಕರಿಗೆ ಕ್ರೀಡಾ ಅಧ್ಯಯನ ಪ್ರವಾಸಕ್ಕಾಗಿ | 255.00 | ನಿರ್ದೇಶಕರು(ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು |

| | | | | |
|---|---|---|---|---|
| | | 7. ಸರ್ಕಾರಿ ದೈಹಿಕ ಶಿಕ್ಷಣ ಕಾಲೇಜು ವಿದ್ಯಾರ್ಥಿ ನಿಲಯ ಕಟ್ಟಡಕ್ಕಾಗಿ.<br>8. ಭಾರತ ಸೇವಾದಳದ ಅಭಿವೃದ್ಧಿ ಕಾರ್ಯಗಳಿಗೆ ಅನುದಾನ ಬಿಡುಗಡೆ ಮಾಡಲು. | | |
| 3(9) | ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಉತ್ತೇಜನಕ್ಕಾಗಿ ಚಟುವಟಿಕೆಗಳು 2202-01-800-1-35-059 | 1. ರಾಜ್ಯದ ಸರ್ಕಾರಿ ಉಪಾಧ್ಯಾಯರ ತರಬೇತಿ ಸಂಸ್ಥೆಗಳಿಗೆ ಕಟ್ಟಡ ದುರಸ್ತಿಗಾಗಿ.<br>2. ರಾಜ್ಯದ ಸರ್ಕಾರಿ ಉಪಾಧ್ಯಾಯರ ತರಬೇತಿ ಸಂಸ್ಥೆಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು.<br>3. ಡಿ.ಎಸ್.ಇ.ಆರ್.ಟಿ.ಯ ವಿಭಾಗದ ಸೆರಿಕ್ ಗ್ರಂಥಾಲಯದ ನಿರ್ವಹಣೆಗಾಗಿ<br>4. ಡಿ.ಎಸ್.ಇ.ಆರ್.ಟಿ.ಯ ಅತಿಥಿ ಗೃಹ ನಿರ್ವಹಣೆಗಾಗಿ.<br>5. ಎನ್.ಟಿ.ಎಸ್.ಇ./ಎನ್.ಎಂ.ಎಂ.ಎಸ್. ಪರೀಕ್ಷೆ ನಿರ್ವಹಣೆಗಾಗಿ.<br>6. ಮೌಲ್ಯ ಮಾಪನ ಸಂಪನ್ಮೂಲ ಪುಸ್ತಕ ರಚನೆಗಾಗಿ | 120.00 | ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ಹೊಸಕೆರೆ ಹಳ್ಳಿ, ಬೆಂಗಳೂರು. |
| 3(10) | ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಉತ್ತೇಜನಕ್ಕಾಗಿ ಚಟುವಟಿಕೆಗಳು 2202-01-800-1-35-059 | ಇ-ಆಡಳಿತ ಕಾರ್ಯಕ್ರಮದಡಿ ಕಂಪ್ಯೂಟರ್ ಹಾರ್ಡ್‌ವೇರ್, ಸಾಫ್ಟ್ ವೇರ್ ಖರೀದಿಗಾಗಿ<br>1.ಆಯುಕ್ತರ ಕಛೇರಿಗೆ ಕಂಪ್ಯೂಟರ್ ಮತ್ತು ಪರಿಕರಗಳು<br>2.ಉಪನಿರ್ದೇಶಕರ ಕಛೇರಿಗಳಿಗೆ ಕಂಪ್ಯೂಟರ್ ಮತ್ತು ಪರಿಕರಗಳು. | 116.00 | ಸಹ ನಿರ್ದೇಶಕರು(ಆಡಳಿತ) ಆಯುಕ್ತರ ಕಛೇರಿ, ಬೆಂಗಳೂರು. |
| 3(11) | ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಉತ್ತೇಜನಕ್ಕಾಗಿ ಚಟುವಟಿಕೆಗಳು 2202-01-800-1-35-422 | ಇ.ಎಂ.ಐ.ಎಸ್. ಚಟುವಟಿಕೆಗಳಿಗಾಗಿ ಎಂ.ಹೆಚ್.ಆರ್.ಡಿ.ದೆಹಲಿ ಇವರ ವತಿಯಿಂದ 2010-11ನೇ ಸಾಲಿಗೆ ಡೈಸ್ ತಂತ್ರಾಂಶವನ್ನು ನಿಡುತ್ತಿದ್ದು ಅದನ್ನು ಜಿಲ್ಲಾ ಹಂತದಲ್ಲಿ ಅನುಷ್ಠಾನಗೊಳಿಸಲು. | 50.00 | ಸಹ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಆಯುಕ್ತರ ಕಛೇರಿ ಪೂರಕ ಕಟ್ಟಡ, ಬೆಂಗಳೂರು. |
| 3(12) | ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಉತ್ತೇಜನಕ್ಕಾಗಿ ಚಟುವಟಿಕೆಗಳು 2202-01-800-1-35-059 | ಶೈಕ್ಷಣಿಕ ಕಾರ್ಯಕ್ರಮಗಳಿಗೆ ಮಾಧ್ಯಮಗಳಲ್ಲಿ ವ್ಯಾಪಕ ಪ್ರಚಾರ ನೀಡಲು ಬಿತ್ತಿ ಪತ್ರ, ಕರಪತ್ರಗಳನ್ನು ಹೊರತರಲು, ಸಭೆಗಳನ್ನು ಆಯೋಜಿಸಲು. | 130.00 | ಸಹ ನಿರ್ದೇಶಕರು, ಶಾಲಾ ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು. |
| | | ಒಟ್ಟು | 1060.00 | |
| 4 | ಸರ್ವ ಶಿಕ್ಷಣ ಅಭಿಯಾನ ಸಮಿತಿ. 2202-01-800-1-44-059- 4623.31, ಲಕ್ಷ<br>422-5376.69 ಲಕ್ಷ<br>423-3000.00 ಲಕ್ಷ | ಈ ಕಾರ್ಯಕ್ರಮಕ್ಕೆ ನಿಗದಿಯಾಗಿರುವ 13000.00 ಲಕ್ಷ ರೂಪಾಯಿಗಳು(ಹದಿಮೂರು ಸಾವಿರ ಲಕ್ಷ ರೂಪಾಯಿಗಳು ಮಾತ್ರ) ಮಿತಿಯೊಳಗೆ ಶೇ.45 ರಷ್ಟು ರಾಜ್ಯದ ಪಾಲಿನ ವೆಚ್ಚ ಭರಿಸಿ (ಕೇಂದ್ರ ಸರ್ಕಾರದಿಂದ ಅದರ ಪಾಲಿನ ಅನುದಾನ ಬಿಡುಗಡೆಯಾಗುವುದನ್ನು ಖಚಿತಪಡಿಸಿಕೊಂಡು) ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗಾಗಿ ನಿಗಧಿತವಾದ ಅನುದಾನವನ್ನು ಅದೇ ಉದ್ದೇಶಕ್ಕೆ ಬಳಸುವ ಷರತ್ತನ್ನು ವಿಧಿಸಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು. | 13000.00 | ರಾಜ್ಯ ಯೋಜನಾ ನಿರ್ದೇಶಕರು (ಎಸ್.ಎಸ್.ಎ)ಆಯುಕ್ತರ ಕಛೇರಿ ಪೂರಕ ಕಟ್ಟಡ, ಬೆಂಗಳೂರು. |

| | | | | |
|---|---|---|---|---|
| 5 | ಬ್ಲಾಕ್ ಮತ್ತು ಕ್ಲಸ್ಟರ್ ರಿಸೋರ್ಸ್ ಸೆಂಟರ್‌ಗಳು. 2202-01-800-1-41-059 | ಡಿ.ಪಿ.ಇ.ಪಿ. ಅಡಿಯಲ್ಲಿನ 16 ಜಿಲ್ಲೆಗಳಲ್ಲಿ ಮಂಜೂರಾಗಿರುವ ಬಿ.ಆರ್.ಸಿ. ಮತ್ತು ಸಿ.ಆರ್.ಸಿ.ಗಳಡಿಯ 1882 ಹುದ್ದೆಗಳನ್ನು ಮುಂದುವರೆಸಿ ಅವುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗೆ ವೇತನ ಪಾವತಿಸಲು ಹಾಗೂ ಈ ಬಗ್ಗೆ ಪ್ರತ್ಯೇಕವಾಗಿ ಲೆಕ್ಕ ಪತ್ರಗಳನ್ನಿಡಲು ಮತ್ತು ಹುದ್ದೆಗಳ ವಿವರಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು. | 3250.00 | ರಾಜ್ಯ ಯೋಜನಾ ನಿರ್ದೇಶಕರು (ಎಸ್.ಎಸ್.ಎ) ಆಯುಕ್ತರ ಕಛೇರಿ ಪೂರಕ ಕಟ್ಟಡ, ಬೆಂಗಳೂರು. |
| 6(1) | ಮುಸ್ತಕಾಲಯ, ಪ್ರಾಥಮಿಕ ಶಾಲೆಗಳ ಸುಧಾರಣೆ ಮತ್ತು ಪ್ರಧಾನ ಮಂತ್ರಿ ಗ್ರಾಮೋದಯ ಯೋಜನೆ 2202-01-800-1-13-059 | ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಸಂಸ್ಥೆಯ ಕಾರ್ಯ ಚಟುವಟಿಕೆಗಳಿಗಾಗಿ | 100.00 | ನಿರ್ದೇಶಕರು, ಕೆ.ಎಸ್.ಇ.ಇ.ಬಿ. ಬೆಂಗಳೂರು. |
| 6(2) | ಮುಸ್ತಕಾಲಯ, ಪ್ರಾಥಮಿಕ ಶಾಲೆಗಳ ಸುಧಾರಣೆ ಮತ್ತು ಪ್ರಧಾನ ಮಂತ್ರಿ ಗ್ರಾಮೋದಯ ಯೋಜನೆ 2202-01-800-1-13-059 | ರಾಷ್ಟ್ರೋತ್ಥಾನ ಸಾಹಿತ್ಯ ಪರಿಷತ್ ಸಂಸ್ಥೆಯವರ ಭಾರತ ಭಾರತಿ ಮುಸ್ತಕ ಖರೀದಿಗಾಗಿ | 100.00 | ಸಹ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಬೆಂಗಳೂರು. |
| 6(3) | ಮುಸ್ತಕಾಲಯ, ಪ್ರಾಥಮಿಕ ಶಾಲೆಗಳ ಸುಧಾರಣೆ ಮತ್ತು ಪ್ರಧಾನ ಮಂತ್ರಿ ಗ್ರಾಮೋದಯ ಯೋಜನೆ 2202-01-800-1-13-059 | ಲೇಖನ ಸಾಮಗ್ರಿಗಳ ಖರೀದಿ ಹಾಗೂ ಮುಸ್ತಕಗಳ ಸಗಟು ಖರೀದಿಗಾಗಿ ( ಹೊಸ ಶಾಲೆಗಳು ಸೇರಿದಂತೆ) | 100,00 | ಸಹ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಬೆಂಗಳೂರು. |
| | | ಒಟ್ಟು | 300.00 | |
| 7 | ಕುವೆಂಪು ಮಾದರಿ ಶಾಲೆಗಳು 2202-01-800-1-72 059 | ರಾಜ್ಯದಲ್ಲಿ ಈಗಾಗಲೇ ಆರಿಸಿರುವ 32 ಕುವೆಂಪು ಮಾದರಿ ಶಾಲೆಗಳಲ್ಲಿ ಬಾಕಿ ಇರುವ ಸಿವಿಲ್ ಕಾಮಗಾರಿ ಮತ್ತು ಇತರೆ ವೆಚ್ಚಗಳನ್ನು ಭರಿಸುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು. | 20.00 | ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. |
| 8(1) | ಸಾರ್ವಜನಿಕ ಶಿಕ್ಷಣ ಆಯುಕ್ತರು, ಬೆಂಗಳೂರು ನಿರ್ದೇಶನ ಮತ್ತು ಆಡಳಿತ 2202-02-001-0-03<br>051-14.00<br>052-1.50<br>059-24.50<br>40.00 ಒಟ್ಟು | 1) 051-ಸಾಮಾನ್ಯ ವೆಚ್ಚಗಳು, ಕಛೇರಿ ಸಾದಿಲ್ವಾರು, ಆಫೀಸ್ ಆಟೋ ಮೇಷನ್‌ಗಾಗಿ ಹಾಗೂ ಕಛೇರಿ ಆಧುನೀಕರಣಕ್ಕಾಗಿ.<br>2) 052-ಆಯುಕ್ತರ ಆಪ್ತಕಾರ್ಯದರ್ಶಿ ಮತ್ತು ಉಪನಿರ್ದೇಶಕರು, ಯೋಜನಾ ಶಾಖೆ, ಪ್ರೌಢ ಶಿಕ್ಷಣ, ಪ್ರಾಥಮಿಕ ಶಿಕ್ಷಣ, ಅಂಕಿ ಅಂಶ ಹಾಗೂ ಸಂಸ್ಕೃತ ರವರ ನಿವಾಸದ ದೂರವಾಣಿ ವೆಚ್ಚಕ್ಕಾಗಿ.<br>3) 059-ಆಯುಕ್ತರಕಛೇರಿಯಂತ್ರೋಪಕರಣ ಗಳ ನಿರ್ವಹಣಾ ವೆಚ್ಚಕ್ಕಾಗಿ | 14.00<br>1.50<br>19.50 | ಸಹ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಬೆಂಗಳೂರು. |
| 8(2) | ಸಾರ್ವಜನಿಕ ಶಿಕ್ಷಣ ಆಯುಕ್ತರು, ನಿರ್ದೇಶನ ಮತ್ತು ಆಡಳಿತ 2202-02-001-0-03-059 | ಆಯುಕ್ತರ ಕಛೇರಿ ಯೋಜನಾ ಶಾಖೆಯ ಸಭೆಗಳ ನಿರ್ವಹಣೆಯ ವೆಚ್ಚಗಳಿಗಾಗಿ | 5.00 | ಉಪನಿರ್ದೇಶಕರು (ಯೋಜನೆ) ಆಯುಕ್ತರ ಕಛೇರಿ, ಬೆಂಗಳೂರು. |
| | | ಒಟ್ಟು | 40.00 | |

| | | | | |
|---|---|---|---|---|
| 11(1) | ಪರಿವೀಕ್ಷಣೆ(ಸೆಕೆಂಡರಿ) 2202–02–101–0–00–059 | ಪ್ರೌಢಶಾಲಾ ಶೈಕ್ಷಣಿಕ ಮಾರ್ಗದರ್ಶಿ ಪುಸ್ತಕಗಳ ಮುದ್ರಣಾ ವೆಚ್ಚಕ್ಕಾಗಿ | 06.00 | ನಿರ್ದೇಶಕರು (ಡಿ.ಎಸ್.ಇ.ಆರ್.ಟಿ.) ಬೆಂಗಳೂರು |
| 11(2) | ಪರಿವೀಕ್ಷಣೆ(ಸೆಕೆಂಡರಿ) 2202–02–101–0–00–059 | ಸರ್ಕಾರಿ ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪ್ರಗತಿ ಪತ್ರ ಮುದ್ರಿಸಲು | 09.00 | ವ್ಯವಸ್ಥಾಪಕ ನಿರ್ದೇಶಕರು. ಪಠ್ಯಪುಸ್ತಕಸಂಘ, ಬೆಂಗಳೂರು |
| 11(3) | ಪರಿವೀಕ್ಷಣೆ(ಸೆಕೆಂಡರಿ) 2202–02–101–0–00–059 | ಆಯುಕ್ತರ ಕಾರ್ಯಾಲಯದ ಕಂಪ್ಯೂಟರ್ ಯುಪಿಎಸ್ ಝೆರಾಕ್ಸ್ ಯಂತ್ರಗಳ ನಿರ್ವಹಣೆ, ಝೆರಾಕ್ಸ್ ಯಂತ್ರಗಳ ಖರೀದಿ ಮತ್ತು ಅಗತ್ಯ ಸ್ಟೇಷನರಿ ಖರೀದಿಗಾಗಿ | 25.00 | ಸಹ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಬೆಂಗಳೂರು. |
| 11(4) | ಪರಿವೀಕ್ಷಣೆ(ಸೆಕೆಂಡರಿ) 2202–02–101–0–00–041 | ಮೈಸೂರು ಮತ್ತು ಬೆಳಗಾಂ ವಿಭಾಗೀಯ ಸಹ ನಿರ್ದೇಶಕರುಗಳ ಕಾರ್ಯಾಲಯಗಳ ಪ್ರಯಾಣ ವೆಚ್ಚಗಳಿಗಾಗಿ | 12.00 | ಸಹ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಬೆಂಗಳೂರು. |
| 11(5) | ಪರಿವೀಕ್ಷಣೆ(ಸೆಕೆಂಡರಿ) 2202–02–101–0–00–051 | ಮೈಸೂರು ಮತ್ತು ಬೆಳಗಾಂ ವಿಭಾಗೀಯ ಸಹ ನಿರ್ದೇಶಕರ ಕಾರ್ಯಾಲಯಗಳ ಸ್ಟೇಷನರಿ, ಸಾದಿಲ್ವಾರು ವೆಚ್ಚಗಳಿಗಾಗಿ | 08.00 | ಸಹ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಬೆಂಗಳೂರು. |
| | | ಒಟ್ಟು | 60.00 | |
| 12 | ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ 2202–02–800–1–01 422–ರೂ.200–00ಲಕ್ಷ 423–ರ.100–00ಲಕ್ಷ | ಎಸ್.ಎಸ್.ಎಲ್.ಸಿ. ಪರೀಕ್ಷೆ ತೆಗೆದುಕೊಳ್ಳುವ ಪ.ಜಾತಿ/ಪ.ಪಂಗಡದ ಎಲ್ಲಾ ಮಕ್ಕಳ ಪರೀಕ್ಷಾ ಶುಲ್ಕ ಮರುಪಾವತಿ ಕಾರ್ಯಕ್ರಮಕ್ಕಾಗಿ | 300.00 | ನಿರ್ದೇಶಕರು, ಕ.ಪ್ರೌ.ಶಿ.ಪ. ಮಂ.ಬೆಂಗಳೂರು |
| 13 (1) | ಪ್ರೌಢಶಾಲಾ ಕಟ್ಟಡಗಳ ನಿರ್ಮಾಣ(ನಬಾರ್ಡ್) 2202–02–800–1–10–059 | ಅತೀ ಅವಶ್ಯವಿರುವ ನಗರ ಪ್ರದೇಶದ ಕಟ್ಟಡ ರಹಿತ ಸರ್ಕಾರಿ ಪ್ರೌಢಶಾಲೆಗಳಿಗೆ ಅಗತ್ಯ ಕೊಠಡಿಗಳನ್ನು ನಿರ್ಮಿಸಲು | 250.00 | ನಿರ್ದೇಶಕರು (ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. |
| 13(2) | ಪ್ರೌಢಶಾಲಾ ಕಟ್ಟಡಗಳ ನಿರ್ಮಾಣ(ನಬಾರ್ಡ್) 2202–02–800–1–10–059 | ಜಿಲ್ಲಾ ಉಪನಿರ್ದೇಶಕರುಗಳ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯಗಳ ಕಟ್ಟಡಗಳ ನಿರ್ಮಾಣ ಮತ್ತು ಅಗತ್ಯ ದುರಸ್ತಿಗಾಗಿ | 250.00 | ನಿರ್ದೇಶಕರು (ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. |
| 13(3) | ಪ್ರೌಢಶಾಲಾ ಕಟ್ಟಡಗಳ ನಿರ್ಮಾಣ(ನಬಾರ್ಡ್) 2202–02–800–1–10–059 | ಭೂಸ್ವಾಧೀನಕ್ಕಾಗಿ | 100.00 | ನಿರ್ದೇಶಕರು (ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. |
| | | ಒಟ್ಟು | 600.00 | |
| 14 | 8ನೇ ತರಗತಿ ವಿದ್ಯಾರ್ಥಿಗಳಿಗೆ ಬೈಸಿಕಲ್ ನೀಡಿಕೆ 2202–02–800–1–12 059– ರೂ.4000.00 ಲಕ್ಷ 422– ರೂ.2000.00 ಲಕ್ಷ 423– ರೂ.1500.00 ಲಕ್ಷ | ಈ ಕಾರ್ಯಕ್ರಮಕ್ಕೆ ನಿಗಧಿಯಾಗಿರುವ 7500.00 ಲಕ್ಷ ಅನುದಾನದಲ್ಲಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಉಚಿತ ಬೈಸಿಕಲ್ ವಿತರಿಸುವ ಹಾಗೂ ಪತ್ರಿಕಾ ಪ್ರಕಟಣೆ ವೆಚ್ಚ ಮತ್ತು ಜಿಲ್ಲಾ ಮಟ್ಟದ ತಾಂತ್ರಿಕ ಸಮಿತಿಗೆ ತರಬೇತಿ ಸಭೆಗಳ ವೆಚ್ಚಗಳಿಗಾಗಿ ರೂ.10.00 ಲಕ್ಷ ಗಳನ್ನು ಭರಿಸಿ ಕಾರ್ಯಕ್ರಮವನ್ನು ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ ಮೊತ್ತವನ್ನು ಆಯಾ ಉದ್ದೇಶಕ್ಕೆ ಬಳಸಿಕಾರ್ಯಕ್ರಮ ಅನುಷ್ಠಾನಗೊಳಿಸಲು. | 7500.00 | ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. |

| | | | | |
|---|---|---|---|---|
| 15 | ಪಂಚ ಸೌಲಭ್ಯ<br>2202-01-800-1-73-059- ರೂ.1663.92ಲಕ್ಷ ,422- ರೂ.2600.00 ಲಕ್ಷ,<br>423- ರೂ.1736.08 ಲಕ್ಷ , 133-ರೂ.500.00ಲಕ್ಷ - ಒಟ್ಟು ರೂ.6500.00ಲಕ್ಷ | | 6500.00 | |
| 15(1) | ಪಂಚ ಸೌಲಭ್ಯ<br>2202-01-800-1-73-<br>059- ರೂ.1363.92 ಲಕ್ಷ<br>422- ರೂ.2200.00 ಲಕ್ಷ<br>423- ರೂ.1436.08 ಲಕ್ಷ<br>133- ರೂ. 500.00 ಲಕ್ಷ<br>ಒಟ್ಟು ರೂ.5500.00ಲಕ್ಷ | ರಾಜ್ಯದಲ್ಲಿನ ನಗರ ಪ್ರದೇಶದ ಪ್ರೌಢಶಾಲೆಗಳಿಗೆ ಕಟ್ಟಡ ನಿರ್ಮಾಣ/ಹೆಚ್ಚುವರಿಕೊಠಡಿಗಳನಿರ್ಮಾಣಕ್ಕಾಗಿ ರೂ.1000.00ಲಕ್ಷ ಮತ್ತು ಗ್ರಾಮೀಣ ಪ್ರದೇಶದ ಪ್ರೌಢಶಾಲೆಗಳಿಗೆಕಟ್ಟಡನಿರ್ಮಾಣ/ಹೆಚ್ಚುವರಿಕೊಠಡಿಗಳ ನಿರ್ಮಾಣಕ್ಕಾಗಿ ರೂ.2075.67ಲಕ್ಷ ಕಾಂಪೌಂಡ್ ನಿರ್ಮಾಣಕ್ಕಾಗಿ ನಗರಪ್ರದೇಶಕ್ಕೆ ರೂ.500.00ಲಕ್ಷ ಮತ್ತು ಗ್ರಾಮೀಣ ಪ್ರದೇಶಕ್ಕೆ ರೂ.300.00ಲಕ್ಷ ಶೌಚಾಲಯಮತ್ತು ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲು ನಗರ ಪ್ರದೇಶಕ್ಕೆ ರೂ.500.00ಲಕ್ಷ ಗ್ರಾಮೀಣ ಪ್ರದೇಶಕ್ಕೆ ರೂ.500.00 ಲಕ್ಷ ಹೀಗೆ ಒಟ್ಟಾರೆ ರೂ.4875.67 ಲಕ್ಷ ಹಾಗೂ ಡಾ: ನಂಜುಂಡಪ್ಪ ವರದಿಯನುಸಾರ ರಾಜ್ಯದ ಅತ್ಯಂತ ಹಿಂದುಳಿದ 39 ತಾಲ್ಲೂಕುಗಳ ಸರ್ಕಾರಿ ಪ್ರೌಢಶಾಲೆಗಳಿಗೆ ಕುಡಿಯುವ ನೀರು ಹಾಗೂ ಶೌಚಾಲಯ ಒದಗಿಸಲು ಎಸ್.ಡಿ.ಪಿ.ಯೋಜನೆಯಡಿ 2009-10ನೇ ಸಾಲಿನಲ್ಲಿ ಬಾಕಿನೀಡಬೇಕಾದ(133-ರೂ.500.00 ಲಕ್ಷ ಮತ್ತು 422-124.33ಲಕ್ಷ) ಮೊತ್ತ ರೂ.624.33 ಲಕ್ಷಗಳನ್ನು ಸದರಿ ಉದ್ದೇಶಕ್ಕಾಗಿ ಬಳಸಿಕೊಳ್ಳಲು ಮತ್ತು ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ ಮೊತ್ತವನ್ನು ಆಯಾ ಉದ್ದೇಶಕ್ಕೆ ಬಳಸಿ ಅನುಷ್ಠಾನಗೊಳಿಸುವ ಷರತ್ತನ್ನು ವಿಧಿಸಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು. | 5500.00 | ನಿರ್ದೇಶಕರು (ಪ್ರೌಢಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. |
| 15(2) | ಪಂಚ ಸೌಲಭ್ಯ<br>2202-01-800-1-73-<br>059- ರೂ.300.00 ಲಕ್ಷ<br>422- ರೂ.400.00 ಲಕ್ಷ<br>423- ರೂ.300.00 ಲಕ್ಷ<br>ಒಟ್ಟು ರೂ.1000.00ಲಕ್ಷ | ರಾಜ್ಯದಲ್ಲಿನ ನಗರ ಪ್ರದೇಶದ ಪ್ರಾಥಮಿಕ ಶಾಲೆಗಳಿಗೆ ಕಾಂಪೌಂಡ್ ನಿರ್ಮಾಣಕ್ಕಾಗಿ ರೂ.400.00 ಲಕ್ಷ, ಗ್ರಾಮೀಣ ಪ್ರದೇಶದ ಪ್ರಾಥಮಿಕ ಶಾಲೆಗಳಿಗೆ ಕಾಂಪೌಂಡ್ ನಿರ್ಮಾಣಕ್ಕಾಗಿ ರೂ.100.00 ಲಕ್ಷ ಹಾಗೂ ನಗರ ಪ್ರದೇಶದ ಪ್ರಾಥಮಿಕ ಶಾಲೆಗಳಿಗೆ ಕುಡಿಯುವ ನೀರು ಮತ್ತು ಶೌಚಾಲಯ ಸೌಲಭ್ಯ ಕಲ್ಪಿಸಲು ರೂ.400.00ಲಕ್ಷ ಮತ್ತು ಗ್ರಾಮೀಣ ಪ್ರದೇಶದ ಪ್ರಾಥಮಿಕ ಶಾಲೆಗಳಿಗೆ ಕುಡಿಯುವ ನೀರು ಮತ್ತು ಶೌಚಾಲಯ ವ್ಯವಸ್ಥೆ ಕಲ್ಪಿಸಲು ರೂ.100.00 ಲಕ್ಷ ಹೀಗೆ ಒಟ್ಟಾರೆ ರೂ 1000.00 ಲಕ್ಷಗಳನ್ನು ಒದಗಿಸಿ ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆ ಮೊತ್ತವನ್ನು ಆಯಾ ಉದ್ದೇಶಕ್ಕೆ ಬಳಸುವ ಷರತ್ತನ್ನು ವಿಧಿಸಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು | 1000.00 | ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. |
| | | ಒಟ್ಟು | 6500.00 | |
| 16 | ಶಿಕ್ಷಣ ಆಡಳಿತ ಸುಧಾರಣೆಗಾಗಿ ಕರ್ನಾಟಕಕ್ಕೆ ಐ.ಡಿ.ಎಫ್. ಅನುದಾನ<br>2202-01-800-1-04-059 | ಯೋಜನೆ ಕಾರ್ಯಕ್ರಮಗಳ ಘಟಕಕ್ಕೆ(ಪಿ.ಪಿ.ಯು) ಸಂಬಂಧಪಟ್ಟ ಅಂಗೀಕೃತ ವೆಚ್ಚಗಳಿಗಾಗಿ ಬಳಸಿಕೊಳ್ಳಲು | 200.00 | ರಾಜ್ಯ ಯೋಜನಾ ನಿರ್ದೇಶಕರು, ಸ.ಶಿ.ಅಭಿಯಾನ, ಆಯುಕ್ತರ ಕಛೇರಿ, ಮೂರಕ ಕಟ್ಟಡ, ಬೆಂಗಳೂರು. |

| | | | | |
|---|---|---|---|---|
| 17 | ಸರ್ಕಾರಿ ಪ್ರೌಢಶಾಲಾ ಪರಿಶಿಷ್ಟ ಜಾತಿ/ವರ್ಗದ ವಿದ್ಯಾರ್ಥಿಗಳ ಸರ್ಕಾರೇತರ ಶುಲ್ಕಗಳ ಮರುಪಾವತಿಗಾಗಿ 2202-02-800-1-06<br>422- ರೂ.1100.00 ಲಕ್ಷ<br>423- ರೂ. 200.00 ಲಕ್ಷ | ಸರ್ಕಾರಿ ಶಾಲೆಗಳಲ್ಲಿ 1 ರಿಂದ 10 ನೇತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ.ಜಾತಿ/ಪ.ವರ್ಗದ ಎಲ್ಲಾ ಮಕ್ಕಳ ಪೈಕಿ 1 ರಿಂದ 5 ನೇ ತರಗತಿ ಮಕ್ಕಳಿಗೆ ತಲಾ ಒಂದು ಶಾಲಾಬ್ಯಾಗ್ ಮತ್ತು 1 ರಿಂದ 4 ನೇ ತರಗತಿ ಮಕ್ಕಳಿಗೆ ತಲಾ 3 ನೋಟ್ ಪುಸ್ತಕ ಮತ್ತು 5 ರಿಂದ 7 ನೇ ತರಗತಿ ಮಕ್ಕಳಿಗೆ ತಲಾ 5 ನೋಟ್ ಪುಸ್ತಕ ಮತ್ತು 8 ರಿಂದ 10 ನೇ ತರಗತಿ ಮಕ್ಕಳಿಗೆ ತಲಾ 6 ನೋಟ್ ಪುಸ್ತಕದಂತೆ ವಿತರಿಸಲು-ಪ್ರತಿ ಶಾಲಾ ಬ್ಯಾಗ್‌ನ ದರ ರೂ.83.00 ಹಾಗೂ ಪ್ರತಿನೋಟ್ ಪುಸ್ತಕದ ದರ ರೂ.13.00 ಗಳಿಗೆ ಮೀರದಂತೆ ಒಟ್ಟು 19.30 ಲಕ್ಷ ಮಕ್ಕಳಿಗೆ ವಿತರಿಸುವ ಕಾರ್ಯಕ್ರಮವನ್ನು ಎಸ್.ಡಿ.ಎಂ.ಸಿ.ಗಳ ಮೂಲಕ ಅನುಷ್ಠಾನಗೊಳಿಸಲು. | 1300.00 | ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. |
| 18 | ಮಾಸ್ತಿ ವೆಂಕಟೇಶ ಅಯ್ಯಂಗಾರ್ ಶಾಲೆ<br>2202-80-800-0-32-059 | ಮಾಲೂರು ತಾಲ್ಲೂಕು ಮಾಸ್ತಿಯಲ್ಲಿನ ಸರ್ಕಾರಿ ವಸತಿ ಪ್ರೌಢಶಾಲೆಯ ವಸತಿ ವಿಭಾಗದ ನಿರ್ವಹಣಾ ವೆಚ್ಚಗಳನ್ನು (ಹೆಚ್ಚುವರಿ ಸಿಬ್ಬಂದಿ ವೇತನಗಳೂ ಸೇರಿದಂತೆ) ಭರಿಸುವ ಕಾರ್ಯಕ್ರಮವನ್ನು ಜಿಲ್ಲಾ ಪಂಚಾಯತ್ ಮೂಲಕ ಅನುಷ್ಠಾನಗೊಳಿಸಲು. | 20.00 | ನಿರ್ದೇಶಕರು (ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. |
| 19 | ಸೈನಿಕ ಶಾಲೆ, ಕೂಡಿಗೆ, ಕೊಡಗು ಜಿಲ್ಲೆ. 4202-01-202-1-04-386 - 700.00 ಲಕ್ಷ<br>2202-02-107-5-00-059- 200.00 | ನಿಗಧಿಗೊಳಿಸಿದ ಅನುದಾನದ ಮಿತಿಯೊಳಗೆ ಕಟ್ಟಡ ಇತ್ಯಾದಿ ಹೊಸದಾಗಿ ನಿರ್ಮಾಣ ಮಾಡಲು ಆವರ್ತಕ ಮತ್ತು ಅನಾವರ್ತಕ ವೆಚ್ಚಗಳನ್ನು ಭರಿಸಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು. | 900.00 | ನಿರ್ದೇಶಕರು (ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. |
| 20 | ವೈದ್ಯನಾಥನ್ ಸಮಿತಿ ಶಿಫಾರಸ್ಸುಗಳನ್ನು ಅಳವಡಿಸುವ ಬಗ್ಗೆ<br>2202-80-800-0-34-059 | ಹಿಂದುಳಿದ 114 ಬ್ಲಾಕ್‌ಗಳಲ್ಲಿ ದೈಹಿಕ ಶಿಕ್ಷಣ ಮತ್ತು ಕ್ರೀಡೆಗಳನ್ನು ಅಭಿವೃದ್ಧಿಗೊಳಿಸಲು. ಹಾಗೂ ಉನ್ನತೀಕರಿಸಿದ ಹುದ್ದೆಗಳ ವೇತನ ನೀಡುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು | 200.00 | ನಿರ್ದೇಶಕರು (ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು |
| 21 | ಶಿಕ್ಷಣದಲ್ಲಿ ಸಹಾಯಾನುದಾನ<br>2202-80-800-0-35-101 | ಅನುದಾನಕ್ಕೆ ಒಳಪಡಿಸಿದ ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಶಾಲಾಶಿಕ್ಷಕರಿಗೆ ವೇತನ ಭರಿಸುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು | 5800.00 | ನಿರ್ದೇಶಕರು (ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು<br>**ಮತ್ತು**<br>ನಿರ್ದೇಶಕರು (ಪ್ರಾಥಮಿಕಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು |
| 22 | 39 ಹಿಂದುಳಿದ ತಾಲ್ಲೂಕುಗಳಲ್ಲಿ ಸಮೂಹ ಸಂಕೀರ್ಣ ನಿರ್ಮಾಣ(ಶಿಕ್ಷಕರ ವಸತಿ ಗೃಹ)<br>4202-01-201-1-03-133 | ಡಾ:ನಂಜುಂಡಪ್ಪ ವರದಿ ಅಧಾರದ ಮೇಲೆ ಹಿಂದುಳಿದ ತಾಲ್ಲೂಕುಗಳಲ್ಲಿ ಶಿಕ್ಷಕರ ಸಮೂಹ ವಸತಿ ಗೃಹ ನಿರ್ಮಿಸುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು. | 1700.00 | ನಿರ್ದೇಶಕರು (ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು |

| | | | | |
|---|---|---|---|---|
| 23 | ಹೆಣ್ಣುಮಕ್ಕಳಿಗಾಗಿ ಕೆ.ಜಿ.ಬಿ.ವಿ. ಮಾದರಿ ಶಾಲೆಯ ಪ್ರಾರಂಭ (ಎಸ್.ಡಿ.ಪಿ.) 2202-02-800-1-15-133- ರೂ.2400.00ಲಕ್ಷ, 422- ರೂ.800.00 ಲಕ್ಷ, 423- ರೂ.300.00 ಲಕ್ಷ. | ಡಾ:ನಂಜುಂಡಪ್ಪ ವರದಿ ಆಧಾರದ ಮೇಲೆ ಅತೀ ಹಿಂದುಳಿದ ತಾಲ್ಲೂಕುಗಳಲ್ಲಿ ಕೆ.ಜಿ.ಬಿ.ವಿ.ಶಾಲೆ ತೆರೆಯಲು ಹಗೂ 2009-10ನೇ ಸಾಲಿನಲ್ಲಿ ಪ್ರಸ್ತಾಪಿಸಿದ 39 ಕೆ.ಜಿ.ಬಿ.ವಿ. ಶಾಲೆಗಳಿಗೆ ಬಾಕಿಯಿರುವ ಅವರ್ತಕ ಮತ್ತು ಅನಾವರ್ತಕ ವೆಚ್ಚವನ್ನು 2010-11 ನೇ ಸಾಲಿನ ಆಯವ್ಯಯದಲ್ಲಿ ಭರಿಸಿ ಮತ್ತು ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ ಮೊತ್ತವನ್ನು ಆಯಾ ಉದ್ದೇಶಕ್ಕೆ ಬಳಸಿ ಅನುಷ್ಠಾನಗೊಳಿಸುವ ಷರತ್ತನ್ನು ವಿಧಿಸಿ ಕಾರ್ಯ ಕ್ರಮವನ್ನು ಅನುಷ್ಠಾನಗೊಳಿಸಲು, | 3500.00 | ನಿರ್ದೇಶಕರು (ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು |
| 24 | ಪ್ರೌಢಶಾಲೆಗಳು (ಜಿಲ್ಲಾವಲಯ ಯೋಜನೆಗಳು) 2202-02-109-0-03-059 | ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪ್ರೌಢಶಾಲೆಗಳ ಶಿಕ್ಷಕರುಗಳಿಗೆ ವೇತನ ಕೊರತೆ ಉಂಟಾದಲ್ಲಿ ಕಡತದ ಮೇಲೆ ಆರ್ಥಿಕ ಇಲಾಖೆಯ ಸಹಮತಿ ಪಡೆದು ಬಿಡುಗಡೆ ಮಾಡುವ ಷರತ್ತನ್ನು ವಿಧಿಸಿ, ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು | 2500.00 | ನಿರ್ದೇಶಕರು (ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು |
| 25 | ಪ್ರೌಢಶಾಲೆಗಳಿಗೆ ಮೂಲಭೂತ ಸೌಲಭ್ಯ(ಎಸ್.ಡಿ.ಪಿ.) 4202-01-202-1-05-133- ರೂ.2000.00ಲಕ್ಷ, 422- ರೂ.1000.00ಲಕ್ಷ, 423- ರೂ.500.00 ಲಕ್ಷ | ಡಾ:ನಂಜುಂಡಪ್ಪ ವರದಿಯನುಸಾರ ರಾಜ್ಯದ 40 ಅತೀ ಹಿಂದುಳಿದ ತಾಲ್ಲೂಕುಗಳ ಸರ್ಕಾರಿ ಪ್ರೌಢಶಾಲೆಗಳಿಗೆ ಕೊಠಡಿ ನಿರ್ಮಾಣ, ಶೌಚಾಲಯ ನಿರ್ಮಾಣ ಮಾಡಲು ಹಾಗೂ ಪೀಠೋಪಕರಣ ವ್ಯವಸ್ಥೆ ಕಲ್ಪಿಸುವ ಮತ್ತು ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ ಮೊತ್ತವನ್ನು ಆಯಾ ಉದ್ದೇಶಕ್ಕೆ ಬಳಸುವ ಷರತ್ತನ್ನು ವಿಧಿಸಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು | 3500.00 | ನಿರ್ದೇಶಕರು (ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು |
| 26 | ಕಾಂಪೌಂಡ್ ಮತ್ತು ಆಟದ ಮೈದಾನ ಸೌಲಭ್ಯ(ಎಸ್.ಡಿ.ಪಿ.) 4202-01-201-1-04-133 | ಡಾ:ನಂಜುಂಡಪ್ಪ ವರದಿಯನುಸಾರ ರಾಜ್ಯದ ಅತ್ಯಂತ ಹಿಂದುಳಿದ 114 ತಾಲ್ಲೂಕುಗಳ ಶಾಲೆಗಳಿಗೆ ಕಾಂಪೌಂಡ್ ವ್ಯವಸ್ಥೆ ಹಾಗೂ ಆಟದ ಮೈದಾನ ಒದಗಿಸುವ ಕಾರ್ಯಕ್ರಮವನ್ನು, ಇದಕ್ಕೆ ಪ್ರತ್ಯೇಕವಾಗಿ ಪ್ರಸ್ತಾವನೆಯನ್ನು ಸಲ್ಲಿಸಿ, ಕಡತದ ಮೇಲೆ ಯೋಜನೆ, ಆರ್ಥಿಕ ಇಲಾಖೆಗಳ ಅನುಮೋದನೆ ಪಡೆದು ಹೊಸ ಘಟಕ ಮಂಜೂರಾತಿ ಉನ್ನತಾಧಿಕಾರ ಸಮಿತಿ ಅನುಮೋದನೆ ಪಡೆಯುವ ಷರತ್ತನ್ನು ವಿಧಿಸಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು | 300.00 | ನಿರ್ದೇಶಕರು (ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು |
| 27 | ವಿದ್ಯಾರ್ಥಿ ವೇತನಗಳು ಮತ್ತು ಸೆಮಿನಾರ್‌ಗಳು(ಸಂಸ್ಕೃತ ಶಿಕ್ಷಣ) 2202-05-103-0-05-059 | 1. ವಿದ್ಯಾರ್ಥಿ ವೇತನಕ್ಕಾಗಿ — 9.00<br>2. ಸಂಸ್ಕೃತ ಕಾಲೇಜುಗಳಲ್ಲಿ ರಾಜ್ಯ ಮಟ್ಟದ ಸ್ಪರ್ಧೆಗೆ — 6.00<br>3. ನಾಲ್ಕು ವಿಭಾಗಗಳಲ್ಲಿ ಸಂಸ್ಕೃತ ಪಾಠಶಾಲಾ ಶಿಕ್ಷಕರಿಗೆ ತರಬೇತಿ ನೀಡಲು — 12.00<br>4. ಸರ್ಕಾರಿ ಜಯಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಬೆಂಗಳೂರು ಇಲ್ಲಿ ಗೋಷ್ಠಿ ಏರ್ಪಡಿಸಲು — 2.00<br>5. ಅನುದಾನಿತ ಸಂಸ್ಕೃತ ಪಾಠಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ರಾಜ್ಯಮಟ್ಟದ ಸ್ಪರ್ಧೆಯನ್ನು ಏರ್ಪಡಿಸಲು — 15.00<br>6. ಗೋಕರ್ಣ ಕಾಲೇಜಿನ ಸಾದಿಲ್ವಾರು — 1.00<br>7. ಇತರೆ ಅಂಗೀಕೃತ ವೆಚ್ಚಗಳಿಗಾಗಿ — 5.00<br>**ಒಟ್ಟು — 70.00** | 70.00 | ನಿರ್ದೇಶಕರು (ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು |

| | | | | |
|---|---|---|---|---|
| 28 | ಸಂಸ್ಕೃತ ಶಿಕ್ಷಣ ಅಭಿವೃದ್ಧಿಗಾಗಿ ಕೇಂದ್ರ ವಲಯ ಯೋಜನೆ 2202-05-103-0-20-101 | ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು 2010-11ನೇ ಸಾಲಿಗೆ ಟೋಕನ್ ಅನುದಾನವಾಗಿದೆ. ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆಯನ್ನು ಖಚಿತಪಡಿಸಿಕೊಂಡ ನಂತರ ಕಾರ್ಯಕ್ರಮ ಅನುಷ್ಠಾನಗೊಳಿಸಲು | 1000.00 | ನಿರ್ದೇಶಕರು (ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು |
| 29 | ಸರ್ಕಾರಿ ಸಂಸ್ಕೃತ ಕಾಲೇಜುಗಳು 2202-05-103-0-01-071-ರೂ.80.00 ಲಕ್ಷ, 117-ರೂ.20.00 ಲಕ್ಷ | ಬೆಂಗಳೂರು, ಮೈಸೂರು ಮತ್ತು ಗೋಕರ್ಣದಲ್ಲಿರುವ ಸರ್ಕಾರಿ ಸಂಸ್ಕೃತ ಕಾಲೇಜುಗಳಿಗೆ ಮೂಲಭೂತ ಸೌಲಭ್ಯಗಳು ಹಾಗೂ ಕಟ್ಟಡ ವಿಸ್ತರಣೆ ಮಾರ್ಪಾಡು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು. | 100.00 | ನಿರ್ದೇಶಕರು (ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು |

**ಮೇಲಿನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸಂಬಂಧಿಸಿದ ಅನುಷ್ಠಾನಾಧಿಕಾರಿಗಳ ವಿಲೇವಾರಿಯಲ್ಲಿ ಈ ಕೆಳಕಂಡ ಷರತ್ತುಗಳನ್ನು ವಿಧಿಸಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಬಿಡುಗಡೆ ಮಾಡಿದೆ.**

1. ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಾಗ ಸರ್ಕಾರಿ ಆದೇಶದಲ್ಲಿ ವಿಧಿಸಿರುವ ನಿಬಂಧನೆಗಳನ್ವಯ ಅನುಷ್ಠಾನಗೊಳಿಸಲು ತಿಳಿಸಿದೆ. ಹಾಗೂ ಪ್ರತಿ ಮಾಹೆ ಆರ್ಥಿಕ ಹಾಗೂ ಭೌತಿಕ ಪ್ರಗತಿಯ ವರದಿಯನ್ನು ಯೋಜನಾ ಶಾಖೆಗೆ ಪ್ರತಿ ತಿಂಗಳ 10ನೇ ತಾರೀಖಿನೊಳಗೆ ಎಂ.ಪಿಕ್. ವರದಿಗಾಗಿ ತಪ್ಪದೆ ಕಳುಹಿಸುವುದು.
2. ಕಾರ್ಯಕ್ರಮಗಳ ಮುಂದೆ ನಮೂದಿಸಿರುವ ಹಣದ ಮಿತಿಯೊಳಗೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು ಹಾಗೂ ಯಾವುದೇ ಕಾರಣಕ್ಕೂ ನಿಗದಿಗೊಳಿಸಿರುವ ಹಣಕ್ಕಿಂತ ಹೆಚ್ಚು ವೆಚ್ಚ ಭರಿಸಬಾರದೆಂದು ತಿಳಿಸಿದೆ. ಹಾಗೂ ಸದರಿ ಮೊತ್ತವನ್ನು ಅನುಮೋದಿತ ಚಟುವಟಿಕೆಗಳಿಗೆ ಮಾತ್ರ ಬಳಸಿಕೊಳ್ಳಲು ಸೂಚಿಸಿದೆ.
3. ಉಲ್ಲೇಖದ ಸರ್ಕಾರಿ ಆದೇಶದಲ್ಲಿನ ಸೂಚನೆಗಳನ್ನು ಕಟ್ಟು ನಿಟ್ಟಾಗಿ ಪಾಲಿಸತಕ್ಕದ್ದು.
4. ಖರೀದಿಗೆ ಸಂಬಂಧಿಸಿದಂತೆ ಪ್ರಸ್ತುತ ಜಾರಿಯಲ್ಲಿರುವ ಖರೀದಿ ನಿಯಮಗಳನ್ನು ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧ್ಯಾದೇಶ 2000 ಮತ್ತು ಅದರಡಿಯಲ್ಲಿನ ನಿಯಮಗಳನ್ನು ಚಾಚೂ ತಪ್ಪದೆ ಕಡ್ಡಾಯವಾಗಿ ಹಾಗೂ ಕಟ್ಟು ನಿಟ್ಟಾಗಿ ಪಾಲಿಸಲು ತಿಳಿಸಿದೆ.
5. ಕಂಪ್ಯೂಟರ್‌ಗಳಿಗೆ ಸಂಬಂಧಿಸಿದಂತೆ, ಇ-ಗವರ್ನೆನ್ಸ್ ಇಲಾಖೆಯು ಸೂಚಿಸಿರುವಂತೆ ಕ್ರಿಯಾ ಯೋಜನೆಗೆ ರಾಜ್ಯಮಟ್ಟದ ಉನ್ನತಾಧಿಕಾರಿ ಸಮಿತಿಯ ಮತ್ತು ಟ್ಯಾಪ್ ಸಮಿತಿಯ ಅನುಮೋದನೆ ಪಡೆಯತಕ್ಕದ್ದು.
6. ಕ್ರಮ ಸಂಖ್ಯೆ (4) ರಲ್ಲಿನ ಸರ್ವ ಶಿಕ್ಷಣ ಅಭಿಯಾನ ಸಮಿತಿಯ ಕೇಂದ್ರ ಕಾರ್ಯಾಲಯ ಮತ್ತು ರಾಜ್ಯ ಮಟ್ಟದಲ್ಲಿ ಭರಿಸಬೇಕಾದ ವೆಚ್ಚಗಳ ಶೇಕಡಾ 45 ರಷ್ಟು ರಾಜ್ಯದ ಪಾಲನ್ನು ಕೇಂದ್ರ ಸರ್ಕಾರದಿಂದ ಶೇಕಡಾ 55 ರಷ್ಟು ಹಣ ಬಿಡುಗಡೆಯಾದಂತೆ ರಾಜ್ಯದ ಪಾಲನ್ನು ಡ್ರಾ ಮಾಡುವ ಅಧಿಕಾರವನ್ನು ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ ಸಮಿತಿ ಇವರಿಗೆ ಅನುಮೋದನೆ ನೀಡಿದೆ.
7. ಕ್ರಮ ಸಂಖ್ಯೆ 3(1) ರಲ್ಲಿನ ಕಾರ್ಯಕ್ರಮಕ್ಕೆ ಬಿಡುಗಡೆ ಮಾಡಲಾದ ಅನುದಾನವನ್ನು ಉರ್ದು ಮತ್ತು ಇತರೆ ಅಲ್ಪ ಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯವು 2010-11ನೇ ಸಾಲಿನಲ್ಲಿ ಅನುಷ್ಠಾನಗೊಳಿಸಬಹುದಾದ ಕಾರ್ಯಕ್ರಮವಾರು ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಹಾಗೂ ಕಾರ್ಯಕ್ರಮಗಳಿಗೆ ಬೇಕಾದ ಅನುದಾವನ್ನು ಹಂಚಿಕೆ ಮಾಡಿಕೊಂಡು ಅನುಷ್ಠಾನಗೊಳಿಸತಕ್ಕದ್ದು.
8. ಕ್ರಮ ಸಂಖ್ಯೆ 8(1) ರಲ್ಲಿನ ಕಾರ್ಯಕ್ರಮಕ್ಕೆ ಬಿಡುಗಡೆ ಮಾಡಲಾದ ಅನುದಾನವನ್ನು ಉಪಕಾರ್ಯಕ್ರಮಗಳವಾರು ಕಛೇರಿ ಪ್ರಸ್ತಾವನೆಯಲ್ಲಿ ತಿಳಿಸಲಾಗಿರುವ ಎಲ್ಲಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸತಕ್ಕದ್ದು.
9. ಕೇಂದ್ರ ಯೋಜನೆ, ಕೇಂದ್ರ ಪುರಸ್ಕೃತ ಯೋಜನೆಗಳಡಿ ಕೇಂದ್ರ ಸರ್ಕಾರವು 2010-11ನೇ ಸಾಲಿಗೆ ಕಾರ್ಯಕ್ರಮಗಳನ್ನು ಮುಂದುವರೆಸಿರುವುದನ್ನು ಮತ್ತು ಆಯವ್ಯಯದ ಹಣ ಒದಗಿಸಿಕೊಂಡಿರುವುದನ್ನು ಮತ್ತು ಹಣದ ಬಿಡುಗಡೆಯನ್ನು ಖಚಿತಪಡಿಸಿಕೊಂಡು ಕಾರ್ಯಕ್ರಮಗಳನ್ನು ಮುಂದುವರೆಸಿ ಅನುಷ್ಠಾನಗೊಳಿಸತಕ್ಕದ್ದು.
10. ಕ್ರಮ ಸಂಖ್ಯೆ: 28 ಕೇಂದ್ರ ವಲಯ ಯೋಜನಾ ಕಾರ್ಯಕ್ರಮದ ಮುಂದೆ ನಮೂದಿಸಿರುವ ಹಣದ ಮಿತಿಯೊಳಗೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಮುನ್ನ ಕೇಂದ್ರ ಸರ್ಕಾರದಿಂದ ಹಣ ಬಂದಿರುವುದನ್ನು ಖಚಿತಪಡಿಸಿಕೊಂಡು ನಂತರವೇ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಷರತ್ತನ್ನು ವಿಧಿಸಿದೆ.
11. ಅನುದಾನವನ್ನು ಜಿಲ್ಲಾವಾರು ಹಂಚಿಕೆ ಮಾಡುವಾಗ ಜಿಲ್ಲೆಗಳ ಅವಶ್ಯಕತೆಗನುಗುಣವಾಗಿ ಅನುದಾನವನ್ನು ಹಂಚಿಕೆ ಮಾಡುವುದು ಹಾಗೂ ಜಿಲ್ಲೆಗಳಿಂದ ಕೊರತೆ ಅನುದಾನದ ಪ್ರಸ್ತಾವನೆಗಳಿಗೆ ಅವಕಾಶ ನೀಡದಂತೆ ನೋಡಿಕೊಳ್ಳುವುದು. ಹಂಚಿಕೆ ಮಾಡಿದ ಮೊತ್ತಕ್ಕಿಂತ ಹೆಚ್ಚಿಗೆ ಭರಿಸಕೂಡದೆಂದು ಸೂಚಿಸಲು ತಿಳಿಸಿದೆ.
12. ಜಿಲ್ಲೆಯ ಉಪನಿರ್ದೇಶಕರುಗಳಿಗೆ/ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಜಿಲ್ಲಾವಾರು ಹಂಚಿಕೆ ಮಾಡಲಾಗುವ ಮೊತ್ತವನ್ನು ಖಜಾನೆ ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್, ಖನಿಜ ಭವನ, ಬೆಂಗಳೂರು-1 ಇಲ್ಲಿಗೆ ಖಜಾನೆ ಗಣಕೀಕರಣ ಮಾಡಲು ಕ್ರಮ ಕೈಗೊಳ್ಳುವುದು. ಡಿಡಿಓ ಕೋಡ್ ಸಮೇತ **ON LINE** ಗಣಕೀಕರಣ ಮಾಡದೇ ಇದ್ದ ಪಕ್ಷದಲ್ಲಿ ಬಿಡುಗಡೆ ಮಾಡಲಾದ ಅನುದಾನವನ್ನು ಖಜಾನೆಗಳಲ್ಲಿ ಡ್ರಾ ಮಾಡಿಕೊಳ್ಳಲು ಕಷ್ಟ ಸಾಧ್ಯವಾಗುತ್ತದೆ. ಆದ್ದರಿಂದ ಈ ಕ್ರಮವನ್ನು ತಪ್ಪದೇ ಕೈಗೊಳ್ಳಲು ಹಾಗೂ ಜಿಲ್ಲೆಯ ಉಪನಿರ್ದೇಶಕರುಗಳಿಗೆ ಬಿಡುಗಡೆ ಮಾಡುವ ಅನುದಾನವನ್ನು ಕೂಡಲೇ ಬಿಡುಗಡೆ ಮಾಡಲು ತಿಳಿಸಿದೆ.

13. ಅನುಷ್ಠಾನಾಧಿಕಾರಿಗಳು ಕಾರ್ಯಕ್ರಮದ ಅನುಷ್ಠಾನ ಕುರಿತು ಕಛೇರಿ ಜ್ಞಾಪನವನ್ನು ನೀಡದ ಹೊರತು ಅನುದಾನವನ್ನು ಆನ್ ಲೈನ್ ಗಣಕೀಕರಣಗೊಳಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಆಯವ್ಯಯ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಬಿಡುಗಡೆ ಮಾಡಲಾಗಿರುವ ಅನುದಾನವನ್ನು ಖಜಾನೆ ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್‌ನಲ್ಲಿ ಅಪ್ ಲೋಡ್ ಮಾಡಲು ಅವಶ್ಯಕವಾಗಿ ಬೇಕಾಗಿರುವ ಅನುಷ್ಠಾನಾಧಿಕಾರಿಗಳು ಡಿಡಿಓ ಗಳಿಗೆ ಹೊರಡಿಸಿದ ಕಛೇರಿ ಜ್ಞಾಪನದ ಪ್ರತಿಯನ್ನು ಯೋಜನಾ ಶಾಖೆಯ ಉಪನಿರ್ದೇಶಕರಿಗೆ ತ್ರಿಪ್ರತಿಗಳಲ್ಲಿ ಕಡ್ಡಾಯವಾಗಿ ಕಳುಹಿಸಿಕೊಡಲು ತಿಳಿಸಿದೆ.
14. **ಅನುಷ್ಠಾನಾಧಿಕಾರಿಗಳು ತಮ್ಮ ಕಛೇರಿ ಜ್ಞಾಪನದಲ್ಲಿ ಆಯವ್ಯಯ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು ಜಿಲ್ಲಾ/ತಾಲ್ಲೂಕು ಖಜಾನೆಗಳಲ್ಲಿ ಯಾವ ಬಿಲ್ಲಿನಲ್ಲಿ ಹಣ ಸೆಳೆಯಬೇಕು, ಮೇಲು ಸಹಿ ಅಗತ್ಯವಿದ್ದಲ್ಲಿ ಯಾರಿಂದ ಮೇಲು ಸಹಿ ಪಡೆಯಬೇಕು, ಯಾರಿಗೆ ಹಣ ಬಿಡುಗಡೆ ಮಾಡಬೇಕು, ಯಾರು ಹಣ ಸೆಳೆಯಬೇಕು ಎಂಬ ವಿವರಗಳನ್ನು ಸ್ಪಷ್ಟವಾಗಿ ತಿಳಿಸಿರಬೇಕು.**
15. ಆಯವ್ಯಯ ಲೆಕ್ಕ ಶೀರ್ಷಿಕೆಯಡಿಯಲ್ಲಿ ಬಿಡುಗಡೆ ಮಾಡಲಾಗಿರುವ ಅನುದಾನವನ್ನು ಆನ್‌ಲೈನ್ ಗಣಕೀಕರಣಗೊಂಡಿದೆಯೇ ಎಂಬುದನ್ನು ಖಚಿತಪಡಿಸಿಕೊಂಡು ಖಜಾನೆಗೆ ಬಿಲ್ಲುಗಳನ್ನು ಸಲ್ಲಿಸುವುದು ಹಾಗೂ ಬಿಲ್ಲುಗಳ ಹಣ ಸೆಳೆಯುವ ಬಗ್ಗೆ ವೈಯಕ್ತಿಕವಾಗಿ ನಿಗಾ ವಹಿಸತಕ್ಕದ್ದು.
16. 2010-11ನೇ ಸಾಲಿನಲ್ಲಿ ಹೊಸ ಆಯವ್ಯಯದಲ್ಲಿ ಯೋಜನಾ ಕಾರ್ಯಕ್ರಮಗಳಡಿಯಲ್ಲಿಯ ಮುಂದುವರೆದ ಯೋಜನೆಗಳಿಗೆ ಮಾಡುವ ವೆಚ್ಚವನ್ನು ಆರ್ಥಿಕ ಇಲಾಖೆಯು ಹೊರಡಿಸಿರುವ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಎಫ್.ಡಿ. 4 ಬಿಪಿಇ 2010, ಬೆಂಗಳೂರು ದಿನಾಂಕ:31ನೇ ಮಾರ್ಚ್ 2010 ರ ಆದೇಶದಲ್ಲಿ ತಿಳಿಸಿದಂತೆ 2010-11ನೇ ಸಾಲಿನ ಲೇಖಾನುದಾನದ ಮಿತಿಯೊಳಗೆ 1ನೇ ಏಪ್ರಿಲ್ 2010 ರಿಂದ 31ನೇ ಜುಲೈ 2010 ರವರೆಗೆ ಮಾತ್ರ ವೆಚ್ಚದ ಮಿತಿ ಹಾಗೂ ಸೂಚನೆಗಳನ್ನು ಪಾಲಿಸಲು ಸೂಚಿಸಿದೆ.
17. ಸಧ್ಯದಲ್ಲಿ ಅನುಷ್ಠಾನದಲ್ಲಿರುವ ಕಟ್ಟಡಗಳಿಗೆ ಅಂದಾಜು ವೆಚ್ಚದ ಶೇಕಡ 30ನ್ನು ಮೊದಲು ಒದಗಿಸಿಕೊಂಡು ನಂತರವೇ ಉಳಿಕೆ ಅನುದಾನವನ್ನು ಹೊಸ ಕಾಮಗಾರಿಗಳಿಗೆ ಉಪಯೋಗಿಸತಕ್ಕದ್ದು.
18. ಯೋಜನಾ ವೆಚ್ಚಗಳ ಬಗ್ಗೆ ಅನುಷ್ಠಾನಾಧಿಕಾರಿಗಳು ಮಾಸಿಕ ಮತ್ತು ತ್ರೈಮಾಸಿಕ ಎಂ.ಪಿಆರ್ ವೆಚ್ಚಗಳ ವಿವರಣಾ ಪತ್ರದಲ್ಲಿದ್ದಂತೆ ವೆಚ್ಚವನ್ನು ಮಾಡಬೇಕು. ವೆಚ್ಚದ ಮಿತಿಯನ್ನು ಮೀರಬಾರದು.
19. ತ್ರೈಮಾಸಿಕ ಪದ್ಧತಿಯಲ್ಲಿ ಅನುದಾನ ಬಿಡುಗಡೆ ಮಡಬೇಕದ ನಿಯಮ ಜಾರಿಯಲ್ಲಿರುವುದರಿಂದ ಪ್ರತಿ ತ್ರೈಮಾಸಿಕ ಅವಧಿಯಲ್ಲಿ ಬಿಡುಗಡೆ ಮಾಡಲಾದ ಅನುದಾನದಲ್ಲಿ ಕನಿಷ್ಠ ಶೇಕಡ 80 ರಷ್ಟು ಖರ್ಚು ಭರಿಸಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿರುವ ಬಗ್ಗೆ ಎಂ.ಪಿಆರ್ ವರದಿ ಸಲ್ಲಿಸದಿದ್ದ ಪಕ್ಷದಲ್ಲಿ ಮುಂದಿನ ತ್ರೈಮಾಸಿಕ ಅವಧಿಯ ಅನುದಾನವನ್ನು ಬಿಡುಗಡೆ ಮಾಡಲಾಗುವುದಿಲ್ಲ.
20. ಮೊದಲನೇ ತ್ರೈಮಾಸಿಕ ಅವಧಿಗೆ ಸರ್ಕಾರಿ ಆದೇಶದ ಅನುಬಂಧ-2 ರಲ್ಲಿ ತೋರಿಸಿರುವ ಕಾರ್ಯಕ್ರಮಗಳಿಗೆ ಬಿಡುಗಡೆ ಮಾಡಿರುವ ಅನುದಾನವನ್ನು ಮಾತ್ರ ವೆಚ್ಚ ಮಾಡಬಹುದಾಗಿದೆ.
21. ಅನುದಾನವನ್ನು ಬಿಡುಗಡೆ ಮಾಡುವಾಗ ಸಂಬಂಧಿಸಿದ ಅಧಿಕಾರಿಗಳು ನಿಗಧಿಪಡಿಸಿದ ಅಧಿಕಾರ ಪ್ರತ್ಯಾಯೋಜನೆ ಮಿತಿಯೊಳಗೆ ಹಣ ಬಿಡುಗಡೆ ಬಗ್ಗೆ ಕ್ರಮ ವಹಿಸತಕ್ಕದ್ದು. ಅಧಿಕಾರ ಪ್ರತ್ಯಾಯೋಜನೆ ಮೀರಿದ ಸಂದರ್ಭದಲ್ಲಿ ಮುಂದುವರಿಕೆ ಕಾರ್ಯಕ್ರಮಗಳ ಮಂಜೂರಾತಿ ಆದೇಶದ ಮೇಲೆಯೇ ಹಣವನ್ನು ಖಜಾನೆಯಿಂದ ಸೆಳೆಯಬಾರದು. ಇದಕ್ಕಾಗಿ ಸರ್ಕಾರದಿಂದ ಹಣ ಬಿಡುಗಡೆ ಆದೇಶವನ್ನು ಪ್ರತ್ಯೇಕವಾಗಿ ಪಡೆಯತಕ್ಕದ್ದು.

**ಆಯುಕ್ತರು,**
**ಸಾರ್ವಜನಿಕ ಶಿಕ್ಷಣ ಇಲಾಖೆ.**

ಗೆ:

1. ಸರ್ಕಾರದ ಕಾರ್ಯದರ್ಶಿಗಳು(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಗೌರವಗಳೊಂದಿಗೆ.
2. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು.
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
4. ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ. 5.ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.
6. ನಿರ್ದೇಶಕರು ಪ್ರೌಢ/ಪ್ರಾಥಮಿಕ ಶಿಕ್ಷಣ, ಆಯುಕ್ತರ ಕಛೇರಿ, ಬೆಂಗಳೂರು.
7. ನಿರ್ದೇಶಕರು, ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು.
8. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. 100 ಅಡಿ ವರ್ತುಲ ರಸ್ತೆ, ಹೊಸಕೆರೆ ಹಳ್ಳಿ, ಬನಶಂಕರಿ 3ನೇ ಹಂತ, ಬೆಂಗಳೂರು.
9. ನಿರ್ದೇಶಕರು(ಮೈನಾರಿಟಿ) ಆಯುಕ್ತರ ಕಛೇರಿ, ಬೆಂಗಳೂರು. 10.ಸಹ ನಿರ್ದೇಶಕರು, ಎಸ್.ಎಸ್.ಎ. ಆಯುಕ್ತರ ಕಛೇರಿ ಪೂರಕ ಕಟ್ಟಡ, ಬೆಂಗಳೂರು. 11. ಸಹ ನಿರ್ದೇಶಕರು(ಆಡಳಿತ) ಸಾ.ಶಿ.ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು.
12. ಸಹ ನಿರ್ದೇಶಕರು(ಶಾಲಾ ಶಿಕ್ಷಣ) ಸಾ.ಶಿ.ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು. 13.ಸಹ ನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ, ಸೆಂಟ್ರಲ್ ಕಾಲೇಜು ಕಟ್ಟಡ, ಬೆಂಗಳೂರು. 14. ಎಲ್ಲಾ ವಿಭಾಗೀಯ ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ. 15.ಖಜಾನಾಧಿಕಾರಿಗಳು ರಾಜ್ಯ ಹುಜೂರ್ ಖಜಾನೆ, ಬೆಂಗಳೂರು. 16.ಮುಖ್ಯ ಲೆಕ್ಕಾಧಿಕಾರಿಗಳು, ಆಯುಕ್ತರ ಕಛೇರಿ, ಬೆಂಗಳೂರು. 17. ಶಾಖಾಧಿಕಾರಿಗಳು,ಆದ್ಯರ್ಪಣೆ ಮತ್ತು ಮರುಹೊಂದಾಣಿಕೆ ಶಾಖೆ, ಆಯುಕ್ತರ ಕಛೇರಿ, ಬೆಂಗಳೂರು. 18.ಉಪನಿರ್ದೇಶಕರು, ಎನ್.ಎಂ.ಸಿ. ಖನಿಜಭವನ, ಬೆಂಗಳೂರು. 19. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳು. 20.ಕಛೇರಿ ಪ್ರತಿ.

E:\sripad\on-going order2010.doc